# ಕಾಲಿಂಗ್ ಬೆಲ್ ಅಲ್ಲ ಘಂಟೆ ಬೆಲ್

ಊರಿಗೆ ಸರಿಯಾದ ದಾರಿ, ಶಾಲೆ, ವಿದ್ಯುತ್, ಆಸ್ಪತ್ರೆ, ಶುದ್ಧ ನೀರು ಇವ್ಯಾವುದು ಇಲ್ಲದ ಕಾಲವದು. ಪ್ರತಿ ಮನೆಯವರು ತಮಗೆ ಬೇಕಾದ ಎಲ್ಲಾ ಅವಶ್ಯಕ ವಸ್ತುಗಳನ್ನು, ಅವಶ್ಯಕ ಸವಲತ್ತುಗಳನ್ನು ತಾವೇ ಮಾಡಿಕೊಳ್ಳಬೇಕಾದ ಸಮಯವದು. ಅಂದು ಶ್ರೀಮಂತರು ಎಷ್ಟೇ ದೊಡ್ಡ ಮನೆ ಕಟ್ಟಿದರೂ ಚಿಮಣಿ ದೀಪಗಳೇ ಆ ಮನೆಯನ್ನು ಬೆಳಗಬೇಕಿತ್ತು.

ಹಿಂದಿನ ಕಾಲದಲ್ಲಿ ಯಾರಾದರೂ ಹೊರಗಿನವರು ಮನೆಯೊಳಗಿನವರನ್ನು ಕರೆಯಲು ಅನುಕೂಲವಾಗಲೆಂದು ಈಗಿನ 'ಕಾಲಿಂಗ್ ಬೆಲ್' ಮಾದರಿಯಲ್ಲಿ ಘಂಟೆಗಳನ್ನು ಬಾಗಿಲ ಪಕ್ಕದಲ್ಲಿ ಅಳವಡಿಸುತ್ತಿದ್ದರು. ಘಂಟೆ ಬಾರಿಸಿದರೆ ಆ ಸದ್ದಿಗೆ ಮನೆಯವರು ಹೊರಗೆ ಬರುತ್ತಿದ್ದರು. ಮನೆಯ ವಿಸ್ತಾರದ ಆಧಾರದ ಮೇಲೆ ಘಂಟೆಯ ಆಕಾರವು ಇರುತ್ತಿತ್ತು. ಘಂಟೆಯ ಸದ್ದು ಹೊರಡಿಸುವ ಕಂಪನವು ಮನೆಯವರ ಗುಣಾತ್ಮಾಕ ಪ್ರಭಾವ ಬೀರುತ್ತದೆ ಎಂಬ ನಂಬಿಕೆ ಕೂಡ ಇತ್ತು. ಈ ಘಂಟೆ ಸ್ಥಾಪನೆಯನ್ನು ಗಳಿಗೆ ನೋಡಿ ಮಂತ್ರ ಘೋಷಣೆಯ ಮೂಲಕವೇ ಸ್ಥಾಪನೆ ಮಾಡುತ್ತಿದ್ದರು. ವಿಶೇಷ ದಿನಗಳಲ್ಲಿ ಈ ಘಂಟೆಗೆ ಪೂಜೆ ಪುನಸ್ಕಾರವೂ ನಡೆಯುತ್ತಿತ್ತು. ಕಾಲ ಕಳೆದಂತೆ ಈ ಪದ್ಧತಿ ಕಣ್ಮರೆಯಾಯಿತು. ಯಲ್ಲಾಪುರ ನಗರದ ನಿತ್ಯಾನಂದ ನಾರಾಯಣ ಗಾಂವಕರ ಎಂಬುವರ ಮನೆಯ ಬಾಗಿಲ ಬಳಿ ಈಗಿನ ಕಾಲಿಂಗ್ ಬೆಲ್ ಬದಲು ಆಗಿನ ಕಾಲಿಂಗ್ ಬೆಲ್ ಅಳವಡಿಸಿದ್ದಾರೆ.

–ಬೀರಣ್ಣ ನಾಯಕ ಮೊಗಟಾ





# ಸಂಸಾರ ಸಸಾರವಲ್ಲ...

ಅನ್ವೇಷಣೆಗೆ ಹಸಿವೇ ಮೂಲ ಎಂಬ ಮಾತಿಗೆ ಈ ಚಿತ್ರ ಸ್ಪಷ್ಟ ಉದಾಹರಣೆ. ಚಿತ್ರದಲ್ಲಿ ಕಾಣುವ ವ್ಯಾಪಾರಿಯ ಕುಟುಂಬದ ಮೂಲ ರಾಜಸ್ಥಾನ. ಮಡದಿ, ಮಗುವಿನೊಂದಿಗೆ ಊರೂರು ಸುತ್ತಿ, ಮಣ್ಣಿನ ತವಾ, ಮಣ್ಣಿನ ಬಟ್ಟಲು, ಮಣ್ಣಿನ ಮಡಿಕೆ ಮಾರುವುದು ಇವರ ಕಾಯಕ. ವ್ಯಾಪಾರದ ಅನುಕೂಲಕ್ಕಾಗಿ ಇವರು ಒಂದು ವಾಹನ ಬಳಸುತ್ತಿದ್ದಾರೆ. ಇದುವೇ ಇವರಿಗೆ ಮನೆ, ಅಂಗಡಿ. ವಾಹನದ ರಚನೆಯು ಇವರ ಸಂಸಾರದ ಸ್ಥಿತಿಗತಿಗೆ ಹಿಡಿದ ಕನ್ನಡಿ. ವಾಹನವನ್ನು ಎರಡು ಹಂತಗಳಲ್ಲಿ ವಿಂಗಡಿಸಿರುವ ಈ ವ್ಯಾಪಾರಿ, ಕೆಳ ಹಂತದಲ್ಲಿ ವ್ಯಾಪಾರ ಸಾಮಗ್ರಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡಿದರೆ, ಮೇಲಿನ ಹಂತದಲ್ಲಿ ತನ್ನ ಮಡದಿ, ಮಕ್ಕಳನ್ನು ಇರಿಸಿ ಜೀವನ ಸಾಗಿಸುತ್ತಿದ್ದಾರೆ. ಗಂಡ ಕೆಳ ಹಂತದಲ್ಲಿ ಕೂತು ವ್ಯಾಪಾರ ಮಾಡಿದರೆ, ಮೇಲಿನ ಹಂತದಲ್ಲಿ ಹೆಂಡತಿ ಮಗುವನ್ನು ಕೂರಿಸಿಕೊಂಡು ರೊಟ್ಟಿ ಮಾಡುತ್ತಿದ್ದಾರೆ. ಕೆಳ ಹಂತದಲ್ಲಿ ವ್ಯಾಪಾರವಾದರೆ ಮೇಲಿನ ಹಂತದಲ್ಲಿ ತುತ್ತು ಬಾಯಿಗೇರುತ್ತದೆ ಎಂಬುದನ್ನು ಈ ಚಿತ್ರ ಸೂಕ್ಷ್ಮವಾಗಿ ಕಟ್ಟಿಕೊಡುತ್ತದೆ. ಇದೆಲ್ಲವನ್ನು ನೋಡಿ ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣುಬಟ್ಟೆಗಾಗಿ ಎಂಬುದು ಹೌದೆನಿಸಿತು.

–ಸೋಮ ಮಂಡಘಟ್ಟ, ಶಿವಮೊಗ್ಗ

